16/31

ಕೊಡಗು ಚೀಫ್ ಕಮ್ಮಿಷನರವರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಜನರಲ್.

ಇಸ್ತಿಹಾರ್‌ನಾಮೆ.

ನಂ. 13. ತಾರೀಖು 5ನೇ ಡಿಶಂಬರ್ 1876.

ಈ ಕೆಳಗೆ ಬರುವ ಬೈಲಾನಿಂಧನೆಯು ಚೀಫ್ ಕಮ್ಮಿಷನರವರಿಂದ ಸಮ್ಮತಿಸಲ್ಪಟ್ಟು ಮಂಜೂರ್ ಮಾಡಲ್ಪಟ್ಟು, ಸಕಲಜನಗಳಿಗೂ ತಿಳಿಯುವಬಗ್ಗೆಪ್ರಕಟಿಸಲ ಹುತ್ತೆ.

92. ನೇ ಬೈಲಾ.—ಮ್ಯುನಿಸಿಪೆಲ್ ಸರಹದ್ದುಗಳೊಳಗೆ ಜನನ ಮರಣಗಳನ್ನ ರಿಜಿಸ್ಟರ್ ಮಾಡುವಬಗ್ಗೆ, ಈ ಕೆಳಗೆ ಕಂಡ 6 ಡಿವಿಜ್ಞಾಗಳು ಮಡಿಕೆರೆ ಷಹರಿವಲ್ಲಿ ಕಲ್ಪಿಸಲ್ಪಟ್ಟಿವೆ. ಇಂತಾ ಪ್ರತಿ ಡಿವಿಜನ್ನಿಗೂ ಮ್ಯುನಿಸಿಪೆಲ್ ಕೋರ್ಡಿನವರು ಒಬ್ಬ ಮೆಂಬರನ್ನು ಮೊಕರರ್ ಮಾಡಿರುತ್ತಾರೆ. ಸದರೀ ಸರಹದ್ದುಗಳೊಳಗೆ ಸಂಭವಿಸುವ ಪ್ರತಿ ಜನನವನ್ನೂ, ಮರಣವನ್ನು, ತಿಳಿಸಿಕೊಂಡು ಬರೆದಿಡುವದು ಇವರ ಕೆಲಸವಾಗಿರತಕ್ಕದ್ದು ಮ್ಯುನಿಸಿಪೆಲ್ ಸರಹದ್ದುಗಳೊಳಗೆ ವಾಸ ಮಾಡುವ ದರೋಬಸ್ತು ಜನಗಳೂ, ತಮ್ಮ ತಮ್ಮ ಡಿವಿಜ್ಞಾಗಳ ಮೆಂಬರ್‌ಗಳಿಗೆ, ತಮ್ಮ ಕುಟುಂಬಗಳಲ್ಲಿ ಯಾ ದುನೆಗಳಲ್ಲಿ ಸಂಭವಿಸುವ ಜನನ ಮರಣಗಳನ್ನು 6 ದಿನಗಳೊಳಗಾಗಿ ರಿಪೋರ್ಟುಮಾಡತಕ್ಕದ್ದೆಂದು ತಾಕೀದ್ ಮಾಡಲ್ಪಟ್ಟಿದ್ದಾರೆ. ಯಾವ ಮನುಷ್ಯನಾಗಲಿ ಹಾಗೆ ಮಾಡುವದಕ್ಕೆ ತಪ್ಪಿದರೆ ಅವನು ಬಬ್ಬ ಮಾಜಿಸ್ಟ್ರೇಟರ ಮುಂದೆ ತಪ್ಪು ಸ್ಥಾಪಿಸಲ್ಪಟ್ಟು ಪ್ರತಿ ತಪ್ಪಿಗೂ ಬಂದು ರೂಪಾಯಿ ಜುರ್ಮಾನೆಗೆ ಗುರಿಯಾಗತಕ್ಕದ್ದು.

ಬ್ರಾಹ್ಮಣ ಪೇಟೆ ದೊಡ್ಡ ಬೀದಿ ರಾಣೇ ಪೇಟೆ ಬಾನೇ ವೊಟ್ಟೆ ಗೌಳೀ ಪೇಟೆ ಗಾರೀ ಬೀದಿ.

"ಹುಕ್ಕುಂ ಬಮೋಜೀಬ್,"

T. CLARKE,
Offg. Secretary.